**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಡಾ. ಚಂದ್ರಶೇಖರ್ ಬಿ. ಪಾಟೀಲ್ ಇವರು ದಿನಾಂಕ:18.03.2025ರಂದು ಸದನದ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರ.**

**ಪ್ರಶ್ನೆ:**

ಬೀದರ್ ಜಿಲ್ಲೆ ಹುನಮಾಬಾದ ಪಟ್ಟಣದ ಸರ್ವೆ ನಂ. 375 ರ ವಿಸ್ತೀರ್ಣ 03 ಎಕರೆ 17 ಗುಂಟೆ ವಿನ್ಯಾಸ ನಿವೇಶನಗಳನ್ನು ಬಿಡುಗಡೆ ಮಾಡಿದ್ದು ಸದರಿ ಜಾಗದಲ್ಲಿ ಯಾವುದೇ ರಸ್ತೆ, ಚರಂಡಿ ಕಾಮಗಾರಿ ಹಾಗೂ ಇನ್ನಿತರೆ ಮೂಲಭೂತ ಸೌಕರ್ಯವಿಲ್ಲದೇ ಪೂರ್ತಿ ನಿವೇಶನಗಳನ್ನು ಬಿಡುಗಡೆ ಮಾಡಿದ್ದು, ಲೇಔಟ್ ನಿರ್ಮಿಸುವಾಗ ಸರ್ಕಾರ ಯಾವುದೇ ಆದೇಶ ಹಾಗೂ ನಿಯಮಗಳನ್ನು ಪಾಲಿಸದೇ ಕಾನೂನು ಬಾಹಿರವಾಗಿ ಲೇಔಟ್ ನಿರ್ಮಿಸಿರುವುದರಿಂದ ನಿವೇಶನ ಪಡೆದವರು ಬಹಳ ತೊಂದರೆಗೆ ಒಳಗಾಗಿರುತ್ತಾರೆ. ಆದುದರಿಂದ ಬಿಡುಗಡೆಗೊಳಿಸಿದ ನಿವೇಶನಗಳನ್ನು ಹಿಂಪಡೆದು ಮತ್ತು ನಿವೇಶನಗಳನ್ನು ಬಿಡುಗಡೆ ಮಾಡಿದ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವುದು ಹಾಗೂ ಸದರಿ ಲೇಔಟ್‌ಗೆ ಮೂಲಭೂತ ಸೌಕರ್ಯ ಒದಗಿಸಿ ನಿವೇಶನಗಳನ್ನು ಬಿಡುಗಡೆಗೊಳಿಸಲು ಕ್ರಮ ಕೈಗೊಳ್ಳುವುದು.

**ಉತ್ತರ:**

ಬೀದರ ಜಿಲ್ಲೆ ಹುಮನಾಬಾದ ಪಟ್ಟಣದ ಸರ್ವೇ ನಂ 375 ರ ವಿಸ್ತೀರ್ಣ 03 ಎಕರೆ 17 ಗುಂಟೆ ಬಡಾವಣೆಗೆ ಸಂಬಂಧಿಸಿದ ವಿವರಗಳು ಈ ಕೆಳಗಿನಂತಿವೆ.

1) ಜಿಲ್ಲಾಧಿಕಾರಿ, ಬೀದರ ಇವರ ಅಧಿಕೃತ ಜ್ಞಾಪನಾ ಸಂಖ್ಯೆ: ಸಿ.ಓ,ಎನ್/ ಸಿ.ಆರ್-72/ 2014-15/ 15355, ದಿನಾಂಕ: 28-02-2015ರಲ್ಲಿ ಸರ್ವೆನಂ. 375ರಲ್ಲಿ 3 ಎಕರೆ 17 ಗುಂಟೆ ಜಮೀನು ಭೂಪರಿವರ್ತನೆಯಾಗಿರುತ್ತದೆ.

2) ಪುರಸಭೆ ಯೋಜನಾ ಪ್ರಾಧಿಕಾರ ಹುಮನಾಬಾದ ಇವರ ಅಂತಿಮ ವಿನ್ಯಾಸ ಮಂಜೂರಾತಿ ಆದೇಶ ಸಂಖ್ಯೆ: ಪುಸಯೋ/ ಪ್ರಾಹು/ ವಿನ್ಯಾಸ/ ಸಿ.ಆರ್-02/ 2015-16/460, ದಿನಾಂಕ: 28-06-2023 ರಂದು ವಿನ್ಯಾಸದ ನಕ್ಷೆಗೆ ಅನುಮೋದನೆ ನೀಡಿರುತ್ತಾರೆ. ಸದಸ್ಯ ಕಾರ್ಯದರ್ಶಿಗಳು/ ಮುಖ್ಯಾಧಿಕಾರಿ, ಪುರಸಭೆ ಯೋಜನಾ ಪ್ರಾಧಿಕಾರ ಹುಮನಾಬಾದ ಇವರಿಂದ ದಿನಾಂಕ: 28-06-2023 ರಂದು ಸದರಿ ವಿನ್ಯಾಸಕ್ಕೆ ಅಂತಿಮ ಅನುಮೋದನೆ ನೀಡಲಾಗಿರುತ್ತದೆ.

3) ಹುಮನಾಬಾದ ಪುರಸಭೆ ಕಾರ್ಯಲಯದ ಆದೇಶ ಸಂಖ್ಯೆ: HMC/ TP/ 02/ 2015-16/ 792 TO 793. ದಿನಾಂಕ: 22-09-2023 ರಂದು 42 ನಿವೇಶನಗಳು ಒಳಗೊಂಡಂತೆ ನಾಗರೀಕ ಮೀಸಲಾತಿಗಾಗಿ ಕಾಯ್ದಿರಿಸಲಾದ ಜಾಗ ಮತ್ತು ಉದ್ಯಾನವನ ಮೀಸಲಾತಿಗಾಗಿ ಕಾಯ್ದಿರಿಸಲಾದ ಜಾಗ ಒಳಗೊಂಡಂತೆ ಒಟ್ಟು 44 ನಿವೇಶನಗಳು ಹಿಂದಿನ ಮುಖ್ಯಾಧಿಕಾರಿ ಬಿಡುಗಡೆಗೊಳಿಸಿರುತ್ತಾರೆ.

4) ಕಾಮಗಾರಿ ಮುಕ್ತಾಯ ಪ್ರಮಾಣ ಪತ್ರವನ್ನು ಹುಮನಾಬಾದ ಪುರಸಭೆ ಕಾರ್ಯಾಲಯದ ಕಿರಿಯ ಅಭಿಯಂತರರು ಹಾಗೂ ಹಿಂದಿನ ಮುಖ್ಯಾಧಿಕಾರಿರವರು ರುಜು ಮಾಡಿರುತ್ತಾರೆ.

5) ಸದರಿ ವಿನ್ಯಾಸದಲ್ಲಿ ಉದ್ಯಾನವನ ಮತ್ತು ನಾಗರೀಕ ಸೌಲಭ್ಯಗಳಿಗಾಗಿ ಮೀಸಲಾಗಿರುವ ಜಾಗವನ್ನು ಮುಖ್ಯಾಧಿಕಾರಿ ಪುರಸಭೆ ಹುಮನಾಬಾದ ಇವರ ಹೆಸರಿಗೆ ಹುಮನಾಬಾದ ಪುರಸಭೆಯ ಉಪನೊಂದಾಣಾಧಿಕಾರಿಗಳ ಕಾರ್ಯಾಲಯದಲ್ಲಿ ನೊಂದಣಿಯಾದ ದಸ್ತಾವೇಜು ಸಂಖ್ಯೆ: HUM-1-01271-2023-24. ದಿನಾಂಕ: 08-06-2023ರಲ್ಲಿ ನೊಂದಾಯಿಸಿದೆ.

ಸದರಿ ಬಡಾವಣೆಯಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸುವಲ್ಲಿ ನ್ಯೂನತೆಗಳು ಕಂಡು ಬಂದಿರುತ್ತದೆ ಹಾಗೂ ಅಂತಿಮ ವಿನ್ಯಾಸ ಅನುಮೋದನೆ ನೀಡುವ ಸಂಧರ್ಭದಲ್ಲಿ ನಿವೇಶನ ಬಿಡುಗಡೆಗೊಳಿಸಿಲು ವಿನ್ಯಾಸದಲ್ಲಿ ಅನುಸರಿಸಬೇಕಾದ ಪ್ರಮಾಣದಲ್ಲಿ ಬಿಡುಗಡೆ ಮಾಡದೇ ನೇರವಾಗಿ ಶೇ. 100 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಸುತ್ತೋಲೆ ಪ್ರಕಾರ ಸಂಬಂಧಿಸಿದ ಏಜೆನ್ಸಿ/ ಇಲಾಖೆಯೊಂದಿಗೆ ಜಂಟಿ ಸ್ಥಳ ತನಿಖೆ ಕೈಗೊಂಡಿರುವ ಕುರಿತು ದಾಖಲೆಗಳು ಕಂಡುಬರುವುದಿಲ್ಲ.

ಸದರಿ ಬಡಾವಣೆಗಳ ವಸ್ತು ಸ್ಥಿತಿ ಕುರಿತು ಪರಿಶೀಲನೆ ಮಾಡಲು ಪುರಸಭಾ ತಹಸೀಲ್ದಾರರು ಬೀದರ ರವರ ನೇತೃತ್ವದಲ್ಲಿ ದಿನಾಂಕ: 06-11-2024 ರಂದು ತನಿಖಾ ತಂಡ ರಚಿಸಲಾಗಿರುತ್ತದೆ. ಸದರಿ ತನಿಖಾ ತಂಡವು ದಿನಾಂಕ 11-11-2024 ರಂದು ಸ್ಥಳ ತನಿಖೆ ನಡೆಸಿ ವರದಿ ಸಲ್ಲಿಸಿಲಾಗಿರುತ್ತದೆ. ಸದರಿ ವರದಿಯಲ್ಲಿ ತಿಳಿಸಿದಂತೆ ಸ್ಥಳ ತನಿಖೆ ಕೈಗೊಂಡಾಗ ಸ್ಥಳದಲ್ಲಿ ಕೆಲವು ನ್ಯೂನ್ಯತೆಗಳು ಇರುತ್ತವೆಂದು ತಿಳಿಸಿದ ಪ್ರಯುಕ್ತ ಸಂಬಂಧಿಸಿದ ಇಲಾಖೆಗಳಿಂದ ಪುನಃ ವರದಿ ಪಡೆದುಕೊಂಡು ಖುದ್ದಾಗಿ ಮರು ವಿನ್ಯಾಸದ ಸ್ಥಳವನ್ನು ಪರಿಶೀಲಿಸಿ ನಿಖರವಾದ ವರದಿಯನ್ನು ಸಲ್ಲಿಸುವಂತೆ ದಿನಾಂಕ: 14-11-2024 ರಂದು ಮುಖ್ಯಾಧಿಕಾರಿ, ಪುರಸಭೆ ಹುಮನಾಬಾದರವರಿಗೆ ತಿಳಿಸಲಾಗಿರುತ್ತದೆ.

ಮುಖ್ಯಾಧಿಕಾರಿ, ಪುರಸಭೆ ಹುಮನಾಬಾದರವರ ದಿನಾಂಕ:01.02.2025ರ ಪತ್ರದಲ್ಲಿ ಹಿಂದಿನ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಸದರಿ ವಿನ್ಯಾಸದಲ್ಲಿ ಸಂಪೂರ್ಣ ಕೆಲಸವಾಗದೆ ಶೇ.100 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಿರುವುದು ಕಂಡುಬಂದಿರುವುದರಿಂದ ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ವರದಿಸಿರುತ್ತಾರೆ. ಆದ್ದರಿಂದ ಈ ಕುರಿತು ಕ್ರಮ ಕೈಗೊಳ್ಳುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಇ-ಸಂಖ್ಯೆ: ನಅಇ 93 ಜಿಇಎಲ್ 2025 (ಇ)

**(ರಹೀಂ ಖಾನ್)**
ಪೌರಾಡಳಿತ ಮತ್ತು ಹಜ್ ಸಚಿವರು